ಉತ್ತರಿಸುವುದಿಲ್ಲ. ಇಷ್ಟಕ್ಕೂ ಕಾಶಮ್ಮನ ಬಿಡಾರ ಈಗ ಮಹಡಿಯ ಮೇಲೆ. ತಾನು ಅದೆಷ್ಟೋ ಬಾರಿ ಮನೆಗೆ ಹೋದಾಗಲೂ ಕಾಶಮ್ಮನೇ ತನ್ನನ್ನು ವಿಚಾರಿಸಿಕೊಂಡಿರುವುದು. ಮೇನಕಾ ಕಾಣಿಸಿಕೊಂಡದ್ದು ಕೇವಲ ಎರಡು ಬಾರಿ ಮಾತ್ರ. ಹಾಗಾದರೆ ಮೇನಕಾ ಕೂಡ ಹೆಚ್ಚಾಗಿ ಹೊರಗೆ ಅಲೆಯುತ್ತಿದ್ದಳೇ, ಲಹರಿಯಂತೆ?! ಯೋಚನೆ ಸಂಶಯಗಳುಂಟಾದವು ಅಧಿಕಾರಿಗೆ. ಹಾಗಾದರೆ ಲಹರಿಯ ಯಾವುದೋ ರಹಸ್ಯವನ್ನು ಮೇನಕಾ ತಿಳಿದುಕೊಂಡು ಅವಳನ್ನು ದೂರವಿರಿಸಿದ್ದಾಳೆ. ಅದಕ್ಕೆ ಹೆದರಿ ಲಹರಿ ಮನೆಯಿಂದ ಹೊರಗೆ ಹೋಗಿದ್ದಾಳೆ.

ಈ ವಿಷಯಗಳನ್ನೆಲ್ಲಾ ತಾನು ತನಿಖೆ ನಡೆಸಿದ್ದಾಗಿದೆ. ಇನ್ನು ಸರಿಯಾದ ಮಾಹಿತಿ ಸಿಗಬೇಕಿರುವುದು ಪಾಂಬುವಿನಿಂದ.

ಪಾಂಬುವಿನ ಬಗ್ಗೆ ಪಿಸಿ ಸಾರಂಗನಿಗೆ ನಂಬಿಕೆಯಿಲ್ಲ. ಅವನು ನಂಬಿಕೆಗೆ ಅನರ್ಹನಾದವನು. ಹಿಂದೊಮ್ಮೆ ಅವನನ್ನು ಭೇಟಿಯಾಗುವಾಗ ತಮಗೆ ಬೇಕಾದ ಬಲವಾದ ಸಾಕ್ಷ್ಯವೊಂದನ್ನು ಮುಚ್ಚಿ ಹಾಕಿದ್ದಾನೆನ್ನುವುದು ಪಿಸಿಯ ಆರೋಪ. ಅದೂ ಆಗಿರಲೂಬಹುದು. ಅದಕ್ಕಾಗಿಯೇ ತಾನು ಇಲ್ಲಿಯ ವರೆಗೂ ಕಾದಿರುವುದು. ಇವತ್ತೂ ಕೂಡ ಅವನು ಅದನ್ನೇ ಮುಂದುವರೆಸಿದರೆ ಮೊದಲು ಪಾಂಬುವನ್ನೇ ಠಾಣೆಗೆ ಕರೆಸಿ ವಿಚಾರಣೆ ನಡೆಸಬೇಕು. ಆವಾಗ ಅವನು ತಪ್ಪಿಸಿಕೊಳ್ಳುವುದಕ್ಕೆ ದಾರಿಯಿರುವುದಿಲ್ಲ. ಈ ರಾಜಧಾನಿಯ ಬಗ್ಗೆ ಇನ್ನೂ ಹೆಚ್ಚಿನವರಿಗೆ ಗೊತ್ತಿಲ್ಲ. ಎಂತೆಂತಹ ಕೇಸ್‌ಗಳನ್ನು ಹಿಡಿದದ್ದಿದೆ. ಆಲೋಚಿಸುತ್ತಲೇ ಸಾಧ್ಯತೆಗಳ ಬಗ್ಗೆ ತಲೆಯೋಡಿಸುತ್ತಿದ್ದ ಇನ್ಸ್‌ಪೆಕ್ಟರ್ .

'ಸಾರ್, ಒಳಗೆ ಬರಬಹುದೆ?' ನಯವಾದ ಮಾತುಗಳನ್ನು ಕೇಳಿ ಡೈರಿ ಮತ್ತು ಲಹರಿಯ ಫೈಲನ್ನು ಮುಚ್ಚಿ ಯಥಾ ಸ್ಥಾನದಲ್ಲಿಟ್ಟು ಕತ್ತು ಎತ್ತರಿಸಿ ವ್ಯಕ್ತಿಯನ್ನು ಒಳಗೆ ಬರುವಂತೆ ಸೂಚಿಸಿದ.

ವ್ಯಕ್ತಿ ಡೋರ್ ಕ್ಲೋಸರನ್ನು ಅಳವಡಿಸಿದ ಬಾಗಿಲನ್ನು ದೂಡಿ ಹಾಗೆ ನಿಂತ. ಆ ವ್ಯಕ್ತಿಯನ್ನು ನೋಡುತ್ತಲೇ ರಾಜಧಾನಿಯ ಮುಖದಲ್ಲಿ ನೂರು ಪ್ರಶ್ನೆಗಳು ಎದ್ದವು!

* * *

ವ್ಯಕ್ತಿ ಒಳಗೆ ಬರುತ್ತಲೇ ಇನ್ಸ್‌ಪೆಕ್ಟರ್‌ರಾಜಧಾನಿ ಅವನನ್ನು ಕುಳಿತುಕೊಳ್ಳುವಂತೆ ಸೂಚಿಸಿದ. ವ್ಯಕ್ತಿಯ ಮುಖದಲ್ಲಿ ಆತಂಕ ಮನೆ ಮಾಡಿತ್ತು. ಅದನ್ನು ಗಮನಿಸದಿರಲಿಲ್ಲ ಇನ್ಸ್‌ಪೆಕ್ಟರ್.

ಆ ವ್ಯಕ್ತಿ ದೊಪ್ಪನೆ ಕುರ್ಚಿಯಲ್ಲಿ ಕುಸಿದಾಗ ನಿಟ್ಟುಸಿರಿಟ್ಟ ಅಧಿಕಾರಿ ಸಾವಧಾನದಿಂದ ಪ್ರಶ್ನಿಸಿದ.

'ಚೀಟಿ ಕೊಟ್ಟು ಕಳುಹಿಸಿದ ಮೇಲೆ ಇಲ್ಲಿವರೆಗೂ ಬರುವ ಅವಶ್ಯಕತೆ ಯೇನಿತ್ತು?' ಅವನ ಆತಂಕವನ್ನು ನಿರ್ಲಕ್ಷಿಸಿ ಈ ಪ್ರಶ್ನೆ ಕೇಳಿದ.

ವ್ಯಕ್ತಿ ಮುಖದ ಮೇಲಿನ ಬೆವರನ್ನು ಒರೆಸಿಕೊಂಡು ಸಪ್ಪೆ ಮೋರೆ ಹಾಕಿದ.

'ಸಾರ್, ಇವತ್ತು ಕೂಡ ಮೊನ್ನೆಯ ಹಾಗೆ ಆಗುವುದು ಬೇಡ ಅನ್ನೋ ಕಾರಣಕ್ಕೆ ನಾನು ಚೀಟಿ ಕೊಟ್ಟು ಹೋಗಿದ್ದೆ. ಆದ್ರೆ...'

'ಆದ್ರೆ ಏನಾಯ್ತು? ಚೀಟಿ ನಂಗೆ ಸಿಕ್ಕಿದೆ. ನಾನೂ ನನ್ನ ಸಹಾಯಕ ಸಾರಂಗ ಅಲ್ಲಿಗೆ ಬರ್ತೀವಿ. ಅದಕ್ಕಾಗಿ ನೀನೇ ಖುದ್ದಾಗಿ ಬರೋ ಅವಶ್ಯಕತೆ ಇರ್ಲಿಲ್ಲ'

ಮುಖದಲ್ಲಿ ಮತ್ತಷ್ಟು ಬೆವರಿಳಿಸಿಕೊಂಡಿದ್ದ ವ್ಯಕ್ತಿ ಪೇಚು ಮೋರೆ ಹಾಕಿದ.

'ಸಾರ್, ನಾನು ನಿಮ್ಮನ್ನ ಖುದ್ದಾಗಿ ಭೇಟಿಯಾಗುವುದಕ್ಕೂ ಒಂದು ಕಾರಣ ಇದೆ'

'ಏನದು?'ಹುಬ್ಬುಗಂಟಿಕ್ಕಿದ ಅಧಿಕಾರಿ ಎದುರಿಗೆ ಕುಳಿತವನು ಹೇಳಲಿರುವ ಮಾತುಗಳಿಗಾಗಿ ಕಾತುರನಾದ.

'ಸಾರ್, ನೀವು ನನ್ನ ಮೊದ್ಲು ಕ್ಷಮಿಸ್ಬೇಕು' ಉತ್ತರಿಸದಾದ ಬೆವರು ಇಳಿಸಿಕೊಳ್ಳುತ್ತಿದ್ದ ವ್ಯಕ್ತಿ.

'ಏನು ವಿಷ್ಯ? ಅದನ್ನಾದರೂ ಹೇಳು' ಅಧಿಕಾರಿ ಒತ್ತಾಯಿಸಿದ.

'ನಿಮ್ಮನ್ನು ಬರೋದಿಕ್ಕೆ ಹೇಳಿ ನಾನು ಚೀಟಿ ಕಳುಹಿಸಿದ್ದು ಹೌದು. ಆದ್ರೆ, ನಾನು ಕರೆದುಕೊಂಡು ಬರಲಿದ್ದ ಸಾಕ್ಷಿ ಮಾಯವಾಗಿದ್ದಾನೆ' ವ್ಯಕ್ತಿಯ ಮಾತಿನಿಂದ ಬಾಂಬ್ ಸ್ಫೋಟವಾದಂತೆ ಅಧಿಕಾರಿಯ ಮುಖದಲ್ಲಿ ಗೊಂದಲವೇರ್ಪಟ್ಟಿತು.

ಪಿಸಿ ಸಾರಂಗ ಹೇಳಿರುವ ಮಾತು ಸುಳ್ಳಲ್ಲ. ಎದುರಿಗೆ ಕುಳಿತ ವ್ಯಕ್ತಿ ಇಲಾಖೆಯ ಜೊತೆಗೆ ಆಟವಾಡುತ್ತಿದ್ದಾನೆ. ಅವನನ್ನು ಬೇರೆ ರೀತಿಯಲ್ಲಿ ವಿಚಾರಿಸುವ ಅವಶ್ಯಕತೆ ಇದೆ.

ಇನ್ಸ್‌ಪೆಕ್ಟರ್ ಮೆಲ್ಲಗೆ ಗದ್ದ ಕೆರೆದುಕೊಂಡು ಎದುರಿಗೆ ಕುಳಿತವನನ್ನು ಅಳೆದ. ವ್ಯಕ್ತಿಯಲ್ಲಿ ಈಗ ಸಾಚಾತನ ಕಾಣಲಿಲ್ಲ. ಇರುವುದೊಂದೇ ದಾರಿ!

'ಪಾಂಬು' ಅಧಿಕಾರಿಯ ಕೈಯಲ್ಲಿ ಪೇಪರ್ ವೈಟ್ ತಿರುಗುತ್ತಿತ್ತು.

ಪಾಂಬು ಆ ಕರೆಗೆ ಬೆಚ್ಚಿ ಬಿದ್ದವರಂತೆ ಕುರ್ಚಿಯಲ್ಲಿ ಎಗರಿ ಕುಳಿತ.

'ಸಾರ್' ಅತೀ ವಿಧೇಯತೆ ತೋರಿಸಿದ. ಕಣ್ಣುಗಳು ಮಾತ್ರ ಅಧಿಕಾರಿಯ ನೋಟವನ್ನು ಎದುರಿಸದಾದವು.

'ನಿನ್ನ ಇನ್ನು ನಾನು ನಂಬೋದಿಲ್ಲ. ಇದು ನೀನು ನಮಗೆ ಮಾಡ್ತಿರೋ ಮೋಸ ಅಂದುಕೊಳ್ತೀನಿ' ಅಧಿಕಾರಿಯ ಮಾತು ಕಟುವಾಗಿತ್ತು.

'ಸಾರ್, ದಯವಿಟ್ಟು ನನ್ನ ಮಾತು ನಂಬಿ' ಗೋಗರೆಯುವಂತೆ ಹೇಳಿದ. ಇನ್ಸ್‌ಪೆಕ್ಟರ್ ಮೌನವಾದ.

'ಇವತ್ತು ಆದದ್ದೇನೂಂತ ಹೇಳ್ತೀನಿ...' ಮಾತು ನಿಲ್ಲಿಸಿದ ಪಾಂಬು.

'ಇವತ್ತು ನನ್ನ ದೋಣಿ ನೀರಿಗೆ ಇಳಿಯುವುದಿಲ್ಲ ಅನ್ನೋದು ನನಗೆ ಗೊತ್ತಾಯ್ತು. ನಾನು ಆ ವಿಷಯಕ್ಕಾಗಿ ನನ್ನ ಕೆಲಸದವರನ್ನ ಮಾತಾಡ್ಸೋದಿಕ್ಕೆ ಮರಳು ದಿಣ್ಣೆಗೆ ಹೋಗಿದ್ದೆ. ಅಲ್ಲಿ ನಿಮಗೆ ಬೇಕಾಗಿರೋ ಸಾಕ್ಷೀನ ನೋಡ್ದೆ. ಅವನನ್ನು ಮೊನ್ನೆ ಸಿಟಿಯವರೆಗೂ ಬಿಟ್ಟು ಬಂದವನು ನಾನು. ಮರಳು ದಿಣ್ಣೆ ಅಪಾಯದ ತಾಣಾಂತ ಅವನನ್ನು ಎಚ್ಚರಿಸ್ದೆ...' ಮುಂದುವರೆಸಿದ ಮಾತು ಅಲ್ಲಿಗೆ ನಿಂತಿತು. ಅಧಿಕಾರಿಯ ಮುಖದಲ್ಲಿ ಕುತೂಹಲವಿರುವುದನ್ನು ಪಾಂಬು ಗುರುತಿಸಿಕೊಂಡ.

'ನೀನು ಈ ಮಾತನ್ನು ಈ ಹಿಂದೆಯೂ ನಮ್ಮ ಭೇಟಿಯಲ್ಲಿ ಹೇಳಿದ್ದಿಯಲ್ಲವೆ? ಅವನನ್ನು ನೀನು ಮತ್ತೆ ಭೇಟಿಯಾಗಿದ್ದೀಯಾಂತ ಹೇಳ್ತಿದ್ದಿ?'

'ಹೌದು, ಇದು ಇವತ್ತು ಬೆಳಿಗ್ಗೆ ನಡೆದಿರೋ ಸಂಗತಿ'

'ಅಂದ್ರೆ?'

'ಅಂದ್ರೆ, ಇವತ್ತು ಬೆಳಿಗ್ಗೆ ನನ್ನ ದೋಣಿ ಮೀನುಗಾರಿಕೆಗೆ ತೆರಳೋವಾಗ ನಾನು ಅಲ್ಲಿದ್ದೆ. ಇದು ಸಾಮಾನ್ಯವಾಗಿ ನಾನು ಅಲ್ಲಿರೋ ಸಮಯ. ಆ ಹೊತ್ನಲ್ಲಿ ಅವನು ಮತ್ತೆ ದಂಡೆಯ ಮೇಲೆ ಹುಚ್ಚರ ಹಾಗೆ ನಡೆದಾಡ್ತಿದ್ದ. ಅವನನ್ನು ಕರ್ದು ಮಾತಾಡ್ದೆ. ಸಂಜೆ ಹೊತ್ತು 'ಬಂಡೆ'ಯ ಬಳಿ ಭೇಟಿಯಾಗುವಂತೆ ಸೂಚಿಸಿದ್ದೆ.'

'ಆದ್ರೆ ಈಗ ಏನಾಯ್ತು?'

'ಅವ್ನು ಕಾಣ್ತಿಸ್ಲಿಲ್ಲ'

'ಹಾಗಂತ ನಿಂಗೆ ಯಾರು ಹೇಳಿದ್ರು?'

'ಅದು... ಅದು... ನನ್ನ ಆಪ್ತ ಗೆಳೆಯ, ದಾಬಾದ ಮಾಲೀಕ ಮುತ್ತುಚಾಂಡಿ ಹೇಳ್ದ. ಅದು...'

'ಮುತ್ತು ಚಾಂಡಿ ಯಾರು?'

'ಅದೇ ದಾಬಾದ ಮಾಲೀಕ ಅಂದ್ನಲ್ಲಾ. ಆವತ್ತು ಜೋರು ಮಳೆ ಬಂದ ದಿವ್ಸ ರಾತ್ರಿ ನಾವು ಅವನ ದಾಬಾದಲ್ಲಿ ಉಳ್ಕೊಂಡಿದ್ದು' ಇನ್ಸ್‌ಪೆಕ್ಟರ್ ಗೆ ನೆನಪಿಸುವಂತೆ ಹೇಳಿದ.

ರಾಜಧಾನಿಯ ನೆನಪು ಹಿಂದಕ್ಕೋಡಿತು. ಯಾವುದೋ ಕೇಸ್‌ನ ಜಾಡು ಹಿಡಿದು ಹೋದಾಗ ವಿಪರೀತ ಮಳೆಗೆ ಸಿಲುಕಿಕೊಂಡದ್ದು. ಆಗ ಪಾಂಬು ಅವರಿಗೆ ಆಶ್ರಯ ಕೊಡಿಸಿದ್ದು. ಆ ದಾಬಾ ಅವನ ಕಣ್ಣ ಮುಂದೆ ಸುಳಿಯಿತು. ಅದರ ಮಾಲೀಕ ನೆನಪಾದ ಮುತ್ತು ಚಾಂಡಿ!

'ಮುತ್ತು ಚಾಂಡಿಗೆ ಹೇಗೆ ಗೊತ್ತಾಯ್ತು. ಇಷ್ಟಕ್ಕೂ ನೀನು ಆ ವ್ಯಕ್ತಿಯನ್ನು ಬೆಳಗ್ಗೆ ಮರಳು ದಿಣ್ಣೆಯಲ್ಲಿ ಭೇಟಿಯಾಗಿದ್ದೀಯಲ್ಲವೆ?'

## ಸೆಂಟ್ರಿಂಗ್ ಡೌನ್

ಮಧ್ಯಮ ವರ್ಗದ ಮನುಷ್ಯ
ಕಟ್ಟಿಸುತ್ತಿದ್ದ.. ಹೊಸ ಮನೆ
ಎಲ್ಲಿಗೆ ಬಂತು ಮನೆ? ಎಂದೆ
ಕುತ್ತಿಗೆಗೆ ಬಂತು ಎಂದ!

★ ದೊಡ್ಡರಂಗೇಗೌಡ

